## ಪ್ರಾರ್ಥನೆ

# ರಾಮಭಕ್ತಿ

**ಕಾಲ ಕರಮ ಗುನ ದೋಷ**
**ಜಗ ಜೀವ ತಿಹಾರೇ ಹಾಥ ।**
**ತುಲಸೀ ರಘುಬರ ರಾವರೋ**
**ಜಾನು ಜಾನಕೀನಾಥ ॥ ೧ ॥**



ಓ ರಘುನಾಥ! ಕಾಲ, ಕರ್ಮ, ಗುಣ, ದೋಷ, ಜಗತ್ತು , ಜೀವ ಎಲ್ಲವೂ ನಿನ್ನ ಅಧೀನದಲ್ಲಿವೆ. ಹೇ ಜಾನಕೀನಾಥ, ತುಳಸಿ ಕೂಡಾ ನಿನ್ನವನೆಂದೇ ತಿಳಿ.

**ರೋಗ ನಿಕರ ತನು ಜರಠಪನು ತುಲಸೀ ಸಂಗ ಕುಲೇಗ ।**
**ರಾಮ ಕೃಪಾ ಲೈ ಪಾಲಿಯೇ ದೀನ ಪಾಲಿಬೇ ಜೋಗ ॥ ೨ ॥**

ತುಳಸಿಯ ದೇಹ ರೋಗಗಳ ಆಗರವಾಗಿದೆ. ಅವನನ್ನು ವೃದ್ಧಾಪ್ಯ ಆವರಿಸಿದೆ; ದುರ್ಜನರ ಸಂಗದಲ್ಲಿ ಅವನಿದ್ದಾನೆ. ಓ ರಾಮ! ಅವನ ಮೇಲೆ ಕರುಣೆ ತೋರು. ತುಳಸಿ ತುಂಬಾ ದುರ್ಬಲ, ಅವನನ್ನು ಪಾಲಿಸಬೇಕು.

**ಪರಮಾನಂದ ಕೃಪಾಯತನ ಪರಿಪೂರನ ಕಾಮ ।**
**ಪ್ರೇಮ ಭಗತಿ ಅನಪಾಯನೀ ದೇಹು ಹಮಹಿ ಶ್ರೀರಾಮ ॥ ೩ ॥**

ರಾಮನು ಪರಮಾನಂದ ಪೂರಿತನು; ಕೃಪೆಯ ನಿಲಯವೇ ಆಗಿರುವವನು. ಅವನು ಎಲ್ಲ ಕಾಮನೆಗಳನ್ನೂ ಪೂರ್ಣಗೊಳಿಸುವನು. ಹೇ ರಾಮ! ನಿನ್ನ ಮೇಲೆ ನಮಗೆ ಅಚಲವಾದ ಭಕ್ತಿಯನ್ನು ನೀಡು.

**ಜೋ ಚೇತನ ಕಂಹ ಜಡ ಕರಇ ಜಡಹಿ ಕರಇ ಚೈತನ್ಯ ।**
**ಅಸ ಸಮರ್ಥ ರಘುನಾಯಕಹಿ ಭಜಹಿ ಜೀವ ತೇ ಧನ್ಯ ॥ ೪ ॥**

ಜಡವನ್ನು ಚೇತನವನ್ನಾಗಿಯೂ, ಚೇತನವನ್ನು ಜಡವನ್ನಾಗಿಯೂ ಮಾಡಬಲ್ಲ ರಘುನಾಯಕನನ್ನು ಭಜಿಸುವ ಜೀವಿಯು ನಿಜಕ್ಕೂ ಧನ್ಯ .

**ಭಾವ ಬಸ್ಯ ಭಗವಾನ ಸುಖ ನಿಧಾನ ಕರುನಾ ಭವನ ।**
**ತಜಿ ಮಮತಾ ಮದ ಮಾನ ಭಜಿಅ ಸದಾ ಸೀತಾ ರವನ ॥ ೫ ॥**

ಸುಖದ ಆಗರವೂ ಕರುಣೆಯ ನಿವಾಸವೂ ಆದ ರಾಮನು ಭಕ್ತಿಗೆ ಅಧೀನನು. ಆದ ಕಾರಣ ಮಮತೆ, ಮದ, ಮಾನ ಇವುಗಳನ್ನು ಬಿಡು; ಸದಾ ಸೀತಾರಮಣನಾದ ರಾಮನನ್ನು ಭಜಿಸು.

**ಬೀಜ ರಾಮ ಗುನ ಗನ ನಯನ ಜಲ ಅಂಕುರ ಪುಲಕಾಲಿ ।**
**ಸುಕೃತೀ ಸುತನ ಸುಖೇತ ಬರ ಬಿಲಸತ ತುಲಸೀ ಸಾಲಿ ॥ ೬ ॥**

ಪುಣ್ಯವಂತನಾದವನ ಪರಿಶುದ್ಧವಾದ ದೇಹವೆಂಬ ಹೊಲದಲ್ಲಿ ರಾಮನಾಮವೆಂಬ ಬೀಜವನ್ನು ಬಿತ್ತಿ , ಆನಂದಬಾಷ್ಪವೆಂಬ ನೀರನ್ನು ಎರೆದು, ಪುಳಕಗಳೆಂಬ ಮೊಳಕೆಯೊಡೆದಾಗ — ತುಳಸಿ ಹೇಳುವನು, ಸಮೃದ್ಧವಾದ ಭಕ್ತಿಯೆಂಬ ಬೆಳೆ ಬೆಳೆಯುವುದು.

— *ತುಳಸೀದಾಸ*

## ಸೂಕ್ತಿಪ್ರಭ

## ಸಂತರ ಸೂಕ್ತಿಗಳು

**ಧ**ರ್ಮ ಎಲ್ಲಕ್ಕಿಂತಲೂ ಮಂಗಳಮಯ. ಅಹಿಂಸೆ, ಸಂಯಮ ಹಾಗೂ ತಪಸ್ಸು ಅದರ ಲಕ್ಷಣವೆನಿಸುತ್ತದೆ. ಯಾರ ಮನಸ್ಸು ಯಾವಾಗಲೂ ಧರ್ಮದಲ್ಲಿಯೇ ತೊಡಗಿರುತ್ತದೆಯೋ ಅವರಿಗೆ ದೇವತೆಗಳೇ ನಮಸ್ಕರಿಸುತ್ತಾರೆ.

— ಮಹಾವೀರ

**ಸಾ**ವಿರ ದೇವಾಲಯಗಳು ನಿರ್ಮಾಣವಾಗುವುದು ಒಂದು ಆತ್ಮಕ್ಕೆ ಸಂತೋಷ ನೀಡುವುದಕ್ಕಿಂತ ಕೆಳಮಟ್ಟದ್ದು . ನಿನ್ನ ಅನುಕಂಪದಿಂದ ಒಬ್ಬ ಸ್ವತಂತ್ರ ವ್ಯಕ್ತಿಯನ್ನು ನಿನ್ನ ದಾಸನನ್ನಾಗಿ ಮಾಡು, ಅದು ಸೆರೆಮನೆಯಿಂದ ಸಾವಿರ ಮಂದಿ ಗುಲಾಮರನ್ನು ಬಿಡಿಸುವುದಕ್ಕಿಂತಲೂ ಹೆಚ್ಚಿನದು.

— ಝುರತುಷ್ಟ

**ಸೇ**ವೆ ಮಾಡುವವನು ಮುಕ್ತಿಯ ಮಾರ್ಗವನ್ನು ಕಂಡುಕೊಂಡಿರುತ್ತಾನೆ. ಅವನು ಗಿಡವೊಂದನ್ನು ನೆಟ್ಟು, ಕೆಲವು ವರ್ಷಗಳಾದ ಮೇಲೆ ನೆರಳು, ಹೂ, ಹಣ್ಣುಗಳನ್ನು ಪಡೆಯುವ ವ್ಯಕ್ತಿಯಂತೆ. ಸೇವಾಕಾರ್ಯದ ಫಲ ಇದೇ ರೀತಿ. ಸಹಾಯದ ಅಗತ್ಯವಿದ್ದವರಿಗೆ ಸಹಾಯ ಮಾಡುವವನ ಆನಂದ ಇದೇ ರೀತಿ.

— ಬುದ್ಧ

**ಯಾ**ವುದನ್ನು ನೋಡಿದ ಮೇಲೆ ಅದಕ್ಕಿಂತ ಬೇರೆಯಾಗಿ ನೋಡಬೇಕಾದುದು ಇರುವುದಿಲ್ಲವೋ, ಯಾವುದು ಆದಾಗ ಪುನರ್ಜನ್ಮವಿರುವುದಿಲ್ಲವೋ, ಯಾವುದನ್ನು ತಿಳಿದ ಮೇಲೆ ಅದಕ್ಕಿಂತ ಬೇರೆಯಾಗಿ ತಿಳಿಯಬೇಕಾದದ್ದು ಇರುವುದಿಲ್ಲವೋ ಅದನ್ನೇ ಬ್ರಹ್ಮವೆಂದು ತಿಳಿ.

— ಶ್ರೀ ಶಂಕರ

**ಯಾ**ರು ದೇವರ ಪರಮ ಇಚ್ಛೆಗೆ ಶರಣಾಗುತ್ತಾನೋ ಅವನು ಗುರಿ ಸೇರುತ್ತಾನೆ. ಈ ಗುರಿಯನ್ನು ಮುಟ್ಟಲು ಬೇರೆ ಯಾವ ಕಾರ್ಯದಿಂದಲೂ ಪ್ರಯೋಜನವಾಗದು. ಪವಿತ್ರ ಶಬ್ದದ ಸಂಪರ್ಕದಿಂದ ಮಾನವನಲ್ಲಿ ದಿವ್ಯವಾದ ಇಚ್ಛೆಯು ಪ್ರಕಟಗೊಳ್ಳುವುದು.

— ಗುರುನಾನಕ್